# ಡಾ. ಬಿ.ಆರ್. ಅಂಬೇಡ್ಕರ್ ಅವರ ರಾಷ್ಟ್ರೀಯತೆಯ ಪರಿಕಲ್ಪನೆ: ಒಂದು ವಿಶ್ಲೇಷಣಾತ್ಮಕ ಅಧ್ಯಯನ

ರಂಗಸ್ವಾಮಿ[1] & ಎಚ್.ಎಂ. ಧರ್ಮೇಗೌಡ[2]

[1]ಸಂಶೋಧಕರು, ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ.

[2]ಪ್ರಾಧ್ಯಾಪಕರು, ವಿಶ್ವವಿದ್ಯಾಲಯ ಶ್ರೀಮದ್ ರಂಭಾಪುರಿ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಕಾಲೇಜು, ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ.

DOI: https://doi.org/10.5281/zenodo.15504498

## ABSTRACT:

ವೇದಗಳ ಕಾಲದಿಂದಲೂ ಉಳಿಸಿಕೊಂಡು ಬಂದಿದ್ದ ಹಿಂದೂ ಸಾಮಾಜಿಕ ವ್ಯವಸ್ಥೆ ತೀವ್ರವಾದ ಆಘಾತಕ್ಕೆ ಒಳಗಾಗಿದ್ದು ಭಾರತ ವಸಾಹತು ಯಾಜಮಾನ್ಯಕ್ಕೆ ಒಳಪಟ್ಟ ಮೇಲೆ ತೀವ್ರವಾದ ಸಾಮಾಜಿಕ ಬದಲಾವಣೆಗಳನ್ನು ಕಂಡಿತು. ವಸಾಹತು ಯಾಜಮಾನ್ಯ ಹೊತ್ತುತಂದ ಅನ್ಯಧರ್ಮ, ಅನ್ಯ ಸಂಸ್ಕೃತಿಗಳಿಗೆ ದೇಸಿ ಸಂಸ್ಕೃತಿಗಳು ಹಲವು ಬಗೆಯಲ್ಲಿ ಪ್ರತಿಕ್ರಿಯಿಸಿದವು. ದೇಸಿ ಸಮಾಜದ ಪಾರಂಪರಿಕ ಹಿಂಸೆಗಳನ್ನು ಅನುಭವಿಸಿಕೊಂಡು ಬಂದಿದ್ದ ತಳಸಮುದಾಯಗಳಿಗೆ ವಸಾಹತೀಕರಣ ಬಿಡುಗಡೆಯ ಹಾದಿಯಾಗಿ ಕಂಡುಬಂದಿತು. ಅಂಬೇಡ್ಕರ್ ಅವರು ವಸಾಹತು ಮೂಲದ ಆಧುನಿಕ ಶಿಕ್ಷಣ, ಇಂಗ್ಲಿಷ್ ಭಾಷೆ, ಪ್ರಜಾಪ್ರಭುತ್ವವಾದಿ, ರಾಜಕೀಯ ವ್ಯವಸ್ಥೆಯ ಸ್ಥಾಪನೆ ಮಾಡುವುದರ ಮೂಲಕ ದಲಿತರ ಬಿಡುಗಡೆಯ ಹಾದಿಯನ್ನು ಕಂಡುಕೊಂಡರು. ಅಂಬೇಡ್ಕರ್ ಅವರ ಈ ಬಗೆಯ ಹೋರಾಟ ಮತ್ತು ಚಿಂತನೆಗಳಿಗೆ ಅನೇಕ ಸಮಕಾಲೀನ ಚಿಂತಕರು, ಹೋರಾಟಗಾರರು ಕಾರಣೀಭೂತರಾದರು. ಇವರಲ್ಲಿ ಪ್ರಮುಖರಾದಂತಹ ಮಹಾತ್ಮ ಜ್ಯೋತಿರಾವ್ ಫುಲೆ, ಶಾಹುಮಹಾರಾಜ್, ನಾರಾಯಣಗುರು, ಪೆರಿಯಾರ್ ರಾಮಸ್ವಾಮಿ ನಾಯ್ಕರ್, ದೇವರಾಯ ಇಂಗಳೆ, ಸ್ವಾಮಿ ಧರ್ಮತೀರ್ಥ, ರಾಮಮನೋಹರ ಲೋಹಿಯಾ, ಬಿ. ಶ್ಯಾಮಸುಂದರ್ ಅವರ ಆಲೋಚನೆಗಳು ಅಂಬೇಡ್ಕರ್ ಚಿಂತನೆಗಳಿಗೆ ಪೂರಕವಾದವುಗಳಾಗಿವೆ.

ಡಾ. ಬಿ. ಆರ್. ಅಂಬೇಡ್ಕರ್ ಅವರ ರಾಷ್ಟ್ರೀಯತೆಯನ್ನು ನಾವು ಪರ ಮತ್ತು ವಿರುದ್ಧವಾಗಿರುವಂತಹ ಸೈದ್ಧಾಂತಿಕ ನಿಲುವುಗಳ ಆಧಾರದ ಮೇಲೆ ವಿಶ್ಲೇಷಣೆ ಮಾಡಬೇಕಾಗಿದೆ. ಪ್ರಾಚೀನ ಕಾಲದಲ್ಲಿ ನಮ್ಮ ಭಾರತವು ಆಧ್ಯಾತ್ಮಿಕ ರಾಷ್ಟ್ರೀಯತೆಯನ್ನು ಹೊಂದಿತ್ತು ಎಂಬುದು ಕೆಲವು ಭಾರತೀಯ ಲೇಖಕರ ಅಭಿಪ್ರಾಯವಾಗಿದೆ.

## KEYWORDS:

ಬಿ.ಆರ್. ಅಂಬೇಡ್ಕರ್, ರಾಷ್ಟ್ರೀಯತೆ, ಯಾಜಮಾನ್ಯ, ವಸಾಹತು, ಪ್ರಜಾಪ್ರಭುತ್ವ, ಆಧ್ಯಾತ್ಮಿಕ ರಾಷ್ಟ್ರೀಯತೆ.

**ಪೀಠಿಕೆ:**

ವೇದಗಳ ಕಾಲದಿಂದಲೂ ಉಳಿಸಿಕೊಂಡು ಬಂದಿದ್ದ ಹಿಂದೂ ಸಾಮಾಜಿಕ ವ್ಯವಸ್ಥೆ ತೀವ್ರವಾದ ಆಘಾತಕ್ಕೆ ಒಳಗಾಗಿದ್ದು ಭಾರತ ವಸಾಹತು ಯಾಜಮಾನ್ಯಕ್ಕೆ ಒಳಪಟ್ಟ ಮೇಲೆ ತೀವ್ರವಾದ ಸಾಮಾಜಿಕ ಬದಲಾವಣೆಗಳನ್ನು ಕಂಡಿತು. ವಸಾಹತು ಯಾಜಮಾನ್ಯ ಹೊತ್ತುತಂದ ಅನ್ಯಧರ್ಮ, ಅನ್ಯ ಸಂಸ್ಕೃತಿಗಳಿಗೆ ದೇಸಿ ಸಂಸ್ಕೃತಿಗಳು ಹಲವು ಬಗೆಯಲ್ಲಿ ಪ್ರತಿಕ್ರಿಯಿಸಿದವು. ಆ ಪ್ರಕ್ರಿಯೆಯಲ್ಲಿ ನೇರ ಸ್ವೀಕಾರ, ವಿಮರ್ಶಾತ್ಮಕ ಸ್ವೀಕಾರ, ಸಂಘರ್ಷ, ಸ್ವಪ್ರತಿಪಾದನೆ, ಅನುಕರಣೆ, ಜೀರ್ಣಿಸಿಕೊಳ್ಳುವ ಕ್ರಿಯೆ, ಒಪ್ಪಂದ, ಶರಣಾಗತಿ, ಉಪೇಕ್ಷೆ, ದೇಸಿಮಾದರಿಗಳ ಪುನರುಜ್ಜೀವನ, ಬುಡಮೇಲು ಕೃತ್ಯ, ನಿಷ್ಕ್ರಿಯತೆ ಈ ಬಗೆಯ ಅನೇಕ ಪ್ರಕ್ರಿಯೆಗಳು ಹುಟ್ಟಿಕೊಂಡವು.

ದೇಸಿ ಸಮಾಜದ ಪಾರಂಪರಿಕ ಹಿಂಸೆಗಳನ್ನು ಅನುಭವಿಸಿಕೊಂಡು ಬಂದಿದ್ದ ತಳಸಮುದಾಯಗಳಿಗೆ ವಸಾಹತೀಕರಣ ಬಿಡುಗಡೆಯ ಹಾದಿಯಾಗಿ ಕಂಡುಬಂದಿತು. ಅಂಬೇಡ್ಕರ್ ಅವರು ವಸಾಹತು ಮೂಲದ ಆಧುನಿಕ ಶಿಕ್ಷಣ, ಇಂಗ್ಲಿಷ್ ಭಾಷೆ, ಪ್ರಜಾಪ್ರಭುತ್ವವಾದಿ, ರಾಜಕೀಯ ವ್ಯವಸ್ಥೆಯ ಸ್ಥಾಪನೆ ಮಾಡುವುದರ ಮೂಲಕ ದಲಿತರ ಬಿಡುಗಡೆಯ ಹಾದಿಯನ್ನು ಕಂಡುಕೊಂಡರು. ಈ ಕಾಲಘಟ್ಟದಲ್ಲೇ ವಸಾಹತೀಕರಣಕ್ಕೆ ತೀವ್ರವಾದ ಪ್ರತಿಕ್ರಿಯೆ ತೋರಿದ ಇನ್ನೊಂದು ವರ್ಗ ದೇಸಿಮೌಲ್ಯಗಳ ಪುನರುಜ್ಜೀವನವನ್ನು ಕೈಗೊಂಡಿತ್ತು. ಪರಂಪರೆ ವೈಭವೀಕರಣ, ವರ್ಣ ಹಾಗೂ ಶ್ರಮ ವಿಭಜನೆಯ ಹೆಸರಿನಲ್ಲಿ ಜಾತಿಯನ್ನು ಮರುಸಾಂಸ್ಥೀಕರಿಸುವ ಪ್ರಕ್ರಿಯೆ ಆರಂಭಗೊಂಡಿತು. ಇಂತಹ ಪ್ರಕ್ರಿಯೆಗಳನ್ನು ಎಡ್ವರ್ಡ್ ಸೈಯಿದ್ ಗುರುತಿಸುವ ಹಾಗೆ ವಸಾಹತು ಘಟ್ಟದಲ್ಲಿ ಆರಂಭವಾಗುವ ಭೂತಕಾಲದೆಡೆಗಿನ ಮರುಪ್ರಯಾಣಗಳು ಧಾರ್ಮಿಕ ಹಾಗೂ ರಾಷ್ಟ್ರೀಯ ಮೂಲಭೂತವಾದವನ್ನು ಹುಟ್ಟುಹಾಕುತ್ತವೆ.

ವಸಾಹತುಶಾಹಿಯನ್ನು ವಿರೋಧಿಸುವ ದೇಶಿ ಹೆಸರಿನ ಹೋರಾಟಗಳು ಸಾಂಸ್ಥಿಕ ಸಾಮಾಜಿಕ ವ್ಯವಸ್ಥೆಯ ಬೇರುಗಳನ್ನು ಗಟ್ಟಿಗೊಳಿಸುವ ಪ್ರಯತ್ನಗಳು ನಡೆದವು. ಇಂತಹ ಸಂಕೀರ್ಣ ಕಾಲಘಟ್ಟದಲ್ಲಿ ಅಂಬೇಡ್ಕರ್ ಅವರು ವಸಾಹತುಶಾಹಿಯನ್ನು ವಿರೋಧಿಸುತ್ತಲೇ ಆಂತರಿಕ ಹಿಂಸೆಗಳ ವಿರುದ್ಧ ಹೋರಾಡಿದರು.

ಅಂಬೇಡ್ಕರ್ ಅವರ ಈ ಬಗೆಯ ಹೋರಾಟ ಮತ್ತು ಚಿಂತನೆಗಳಿಗೆ ಅನೇಕ ಸಮಕಾಲೀನ ಚಿಂತಕರು, ಹೋರಾಟಗಾರರು ಕಾರಣೀಭೂತರಾದರು. ಇವರಲ್ಲಿ ಪ್ರಮುಖರಾದಂತಹ ಮಹಾತ್ಮ ಜ್ಯೋತಿರಾವ್ ಫುಲೆ, ಶಾಹುಮಹಾರಾಜ್, ನಾರಾಯಣಗುರು, ಪೆರಿಯಾರ್ ರಾಮಸ್ವಾಮಿ ನಾಯ್ಕರ್, ದೇವರಾಯ ಇಂಗಳೆ,

ಸ್ವಾಮಿ ಧರ್ಮತೀರ್ಥ, ರಾಮಮನೋಹರ ಲೋಹಿಯಾ, ಬಿ. ಶ್ಯಾಮಸುಂದರ್ ಅವರ ಆಲೋಚನೆಗಳು ಅಂಬೇಡ್ಕರ್ ಚಿಂತನೆಗಳಿಗೆ ಪೂರಕವಾದವುಗಳಾಗಿವೆ.

ಡಾ. ಬಿ.ಆರ್. ಅಂಬೇಡ್ಕರ್ ಅವರ ರಾಷ್ಟ್ರೀಯತೆಯ ವಿಚಾರಗಳನ್ನು ಅನೇಕ ಬುದ್ಧಿಜೀವಿಗಳು ವಿಮರ್ಶೆ ಮಾಡಿರುತ್ತಾರೆ. ಅವರುಗಳಲ್ಲಿ ಪ್ರಮುಖರಾಗಿರುವಂತಹ ಅರುಣ್ ಶೌರಿ ಅವರು ತಮ್ಮ "Worshipping of False God" ಎಂಬ ಪುಸ್ತಕದಲ್ಲಿ ಅಂಬೇಡ್ಕರ್ ಅವರ ವಿಚಾರಗಳಿಂದ ಭಾರತೀಯ ರಾಷ್ಟ್ರೀಯತೆಯು ವಿಕೃತಿಯನ್ನು ಪಡೆದುಕೊಂಡಿರುವುದಲ್ಲದೆ ಅಂಬೇಡ್ಕರ್ ಅವರು ಅನೇಕ ಆಧುನಿಕ ಸಮಸ್ಯೆಗಳಿಗೆ ಕಾರಣರಾಗಿದ್ದಾರೆ ಎಂಬ ವಿಮರ್ಶೆಯನ್ನು ಮಾಡಿದ್ದಾರೆ. ಹಾಗೂ ತನ್ನ ಮಾತೃದೇಶದ ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಗಳನ್ನು ಅತ್ಯಂತ ಕಟುವಾಗಿ ಟೀಕಿಸುವ ಮೂಲಕ ಅಂಬೇಡ್ಕರ್ ಅವರು ದೇಶಕ್ಕೆ ದ್ರೋಹವನ್ನೆಸಗಿದ್ದಾರೆ ಎಂಬುದಾಗಿ ವಿಮರ್ಶಿಸಿದ್ದಾರೆ. ಅಂಬೇಡ್ಕರ್ ಮತ್ತು ಅವರ ಅನುಯಾಯಿಗಳಾಗಿರುವಂತಹ ದಲಿತರು ಭಾರತದ ಸ್ವಾತಂತ್ರ್ಯದ ಹೋರಾಟದಲ್ಲಿ ಭಾಗವಹಿಸಿಲ್ಲ ಎಂಬ ಟೀಕೆಯನ್ನು ಮಾಡಿದ್ದಾರೆ.

ಡಾ. ಬಿ. ಆರ್. ಅಂಬೇಡ್ಕರ್‌ದ ಅವರ ರಾಷ್ಟ್ರೀಯತೆಯನ್ನು ನಾವು ಪರ ಮತ್ತು ವಿರುದ್ಧವಾಗಿರುವಂತಹ ಸೈದ್ಧಾಂತಿಕ ನಿಲುವುಗಳ ಆಧಾರದ ಮೇಲೆ ವಿಶ್ಲೇಷಣೆ ಮಾಡಬೇಕಾಗಿದೆ. ಪ್ರಾಚೀನ ಕಾಲದಲ್ಲಿ ನಮ್ಮ ಭಾರತವು ಆಧ್ಯಾತ್ಮಿಕ ರಾಷ್ಟ್ರೀಯತೆಯನ್ನು ಹೊಂದಿತ್ತು ಎಂಬುದು ಕೆಲವು ಭಾರತೀಯ ಲೇಖಕರ ಅಭಿಪ್ರಾಯವಾಗಿದೆ ಹಾಗೂ ಅಂಬೇಡ್ಕರ್ ಅವರ ರಾಷ್ಟ್ರೀಯತೆಯು ಪಾಶ್ಚಿಮಾತ್ಯ ಪರಿಕಲ್ಪನೆಯಾಗಿದೆ ಎಂಬುದು ಇತರೆ ಪೌರಾತ್ಯ ಚಿಂತಕರ ನಿಲುವಾಗಿದೆ. ಈ ಎರಡೂ ನಿಲುವುಗಳ ಆಧಾರದ ಮೇಲೆ ನಾವು ಅಂಬೇಡ್ಕರ್ ಅವರ ರಾಷ್ಟ್ರೀಯತೆಯನ್ನು ವಿಶ್ಲೇಷಿಸಬೇಕಾಗಿದೆ.

**ಸಾಹಿತ್ಯಾವಲೋಕನ:**

"ರಾಷ್ಟ್ರೀಯ ಭಾವನೆಯು ಎರಡಂಚಿನ ಭಾವನೆ. ಏಕಕಾಲದಲ್ಲಿ ಅದು ನಮ್ಮ ಕುಲಬಾಂಧವರ ಬಗ್ಗೆ ಸ್ನೇಹಭಾವನೆಯನ್ನು ಮತ್ತು ಕುಲಬಾಂಧವರಲ್ಲದವರ ಬಗ್ಗೆ ಅಸಹನಾ ಭಾವವನ್ನು ಬೆಳೆಸುತ್ತದೆ" (ಬಿ. ಆರ್. ಅಂಬೇಡ್ಕರ್. 2015, ಸಂ. 6, ಪುಟ 395).

ಅಂಬೇಡ್ಕರ್ ಅವರು ಯಾವುದೇ ಒಂದು ಭೌಗೋಳಿಕ ಪ್ರದೇಶದಲ್ಲಿ ವಾಸಿಸುವಂತಹ ಜನರು ಏಕತೆಯನ್ನು ಹಾಗೂ ಸಹೋದರತೆಯ ಭಾವನೆಯನ್ನು ಹೊಂದಿದ್ದಾರೆ ಎಂಬ ಅಂಶಗಳ ಆಧಾರದ ಮೇಲೆ ಜನತೆ ರಾಷ್ಟ್ರೀಯತೆಯ ಭಾವನೆಯನ್ನು ಹೊಂದಿದ್ದಾರೆ ಎಂದು ಹೇಳಲು ಸಾಧ್ಯವಿಲ್ಲ ಎನ್ನುತ್ತಾರೆ. ಏಕೆಂದರೆ ಏಕಕಾಲದಲ್ಲಿ ಜನರು ತಮ್ಮ ದೇಶ ಅಥವಾ ಪ್ರಾದೇಶಿಕತೆಗೆ ಎಷ್ಟು ಮಹತ್ವ ಹಾಗೂ

ಗೌರವವನ್ನು ಕೊಡುತ್ತಾರೋ ಅಷ್ಟೇ ತೀವ್ರವಾದ ಅಗೌರವವನ್ನು ಹತ್ತಿರದ ದೇಶ ಅಥವಾ ಪ್ರದೇಶದ ಮೇಲೆ ಹೊಂದಿರುತ್ತಾರೆ. ಅಂದರೆ ರಾಷ್ಟ್ರೀಯತೆಯ ಭಾವನೆಯು ದ್ವಿಮುಖಗಳನ್ನು ಹೊಂದಿರುವಂತಹ ಪರಿಕಲ್ಪನೆಯಾಗಿದೆ ಎಂದು ಲೇಖಕರು ವಿವರಿಸುತ್ತಾರೆ.

"ಪ್ರಾಚೀನ ಭಾರತದಲ್ಲಿ ರಾಜಕಿಯ ರಾಷ್ಟ್ರೀಯತೆಯು ಮೊಳೆಯದಿದ್ದರೂ ಧಾರ್ಮಿಕ ರಾಷ್ಟ್ರೀಯತೆ ಬೆಳೆದಿತ್ತು. 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಎಂದು ಭಾವಿಸಿದ್ದ ಭಾರತೀಯರು ತಮಗೆ ಜನ್ಮವಿತ್ತ ವಸುಂಧರೆಯನ್ನು ತಾಯಿಯಂತೆ ಗೌರವಿಸುತ್ತಿದ್ದರು. ದೇಶ ಎನಿಸಿಕೊಳ್ಳಲು ಅತ್ಯವಶ್ಯಕವಾದ ಮಾತೃಭೂಮಿಯು ಭಾರತೀಯರಿದ್ದಿದ್ದು ಗಮನಾರ್ಹವಾದುದು" (ನಂಜುಂಡಸ್ವಾಮಿ ಎ. ಎಸ್. , 1960, ಪು. 11).

ಪ್ರಾಚೀನ ಭಾರತದಲ್ಲಿ ಅನೇಕ ರಾಜವಂಶಗಳು ಆಡಳಿತವನ್ನು ಮಾಡಿದರೂ ರಾಜಕೀಯ ರಾಷ್ಟ್ರೀಯತೆಯನ್ನು ಭಾರತದಲ್ಲಿ ಸಾಧಿಸಲು ಸಾಧ್ಯವಾಗಲಿಲ್ಲ. ಕಾರಣ ಪ್ರಾದೇಶಿಕ ಭಿನ್ನತೆ, ಸಾಂಸ್ಕೃತಿಕ ಭಿನ್ನತೆ ಹಾಗೂ ಭಾಷಾ ಭಿನ್ನತೆಗಳಾದರೂ ಸಹ ಆಧ್ಯಾತ್ಮಿಕವಾಗಿ ಭಾರತದ ಭೌಗೋಳಿಕ ಪ್ರದೇಶವನ್ನು ತಾಯಿಗೆ ಮತ್ತು ಸ್ವರ್ಗಕ್ಕೆ ಹೋಲಿಕೆ ಮಾಡಿ ವರ್ಣಿಸಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಏಕತೆ ಮತ್ತು ಸಮಗ್ರತೆಯನ್ನು ಭಾರತವು ಪ್ರಾಚೀನ ಕಾಲದಿಂದಲೂ ಹೊಂದಿತ್ತು. ಆದ್ದರಿಂದ ನಾವು ಬಹತ್ವದಲ್ಲಿ ಏಕತೆಯನ್ನು ಸಾಧಿಸಿದ್ದೇವೆ. ಆದ್ದರಿಂದ ಈ ಆಧ್ಯಾತ್ಮಿಕ ರಾಷ್ಟ್ರೀಯತೆಯ ಮುಂದೆ ರಾಜಕೀಯ ರಾಷ್ಟ್ರೀಯತೆಯು ನಗಣ್ಯವಾಗಿದೆ ಎಂದು ಲೇಖಕರು ವಿವರಿಸಿದ್ದಾರೆ. ಈ ಮೂಲಕ ಆಧುನಿಕ ರಾಜಕೀಯ ರಾಷ್ಟ್ರೀಯತೆಯು ಭಾರತದ ಪಾರಂಪರಿಕ ರಾಷ್ಟ್ರೀಯತೆಯ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರಿದೆ ಎಂದು ಲೇಖಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

"ಪಾಶ್ಚಿಮಾತ್ಯ ಸಂಸ್ಕೃತಿಯ ವಿರುದ್ಧದ ನಮ್ಮ ಶತಮಾನದ ಹೋರಾಟದಲ್ಲಿ ನಾವು ಗಳಿಸಿದ್ದುದೇನು–ತೊಡುವ ಬಟ್ಟೆಯೇ, ಶಿಕ್ಷಣವೇ, ಬೌದ್ಧಿಕ ಬೆಳವಣಿಗೆಯೇ? ಬ್ರಿಟಿಷರು ನಮಗೆ ಕೊಟ್ಟ ವಿದ್ಯುತ್, ರೈಲುಗಾಡಿ, ತಂತಿ ಸಂದೇಶ ಇತ್ಯಾದಿಗಳು. ಆಟಿಕೆಗಳಾಗಲಿ, ನಿಜ ಗಳಿಕೆಗಳಲ್ಲ. ಪರಕೀಯರು ಕೊಟ್ಟಂತಹುದೆಲ್ಲಾ ಹುಂಬಳಿ (Charity) ಎನಿಸುವುದಾಗಲಿ, ನಾವು ನಮ್ಮ ಸ್ವಪ್ರಯತ್ನದಿಂದ ಗಳಿಸಿದ್ದುದು ಮಾತ್ರ ನಮ್ಮದೆನಿಸುತ್ತದೆ. ನಾವು ಗಳಿಸಬೇಕಾಗಿರುವ ಸ್ವತಂತ್ರ್ಯ ಶಿಕ್ಷಣ, ಆರ್ಥಿಕತೆ ಮತ್ತು ರಾಜಕೀಯ ಜೀವನಗಳದ್ದು" (ಸಿಂಹ, 2021, ಪು. 17).

ಲೇಖಕರು ಭಾರತವು ಆಧುನಿಕವಾಗಿ ಹೊಂದಿರುವಂತಹ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಮತ್ತು ಔದ್ಯೋಗಿಕ ಕ್ಷೇತ್ರಗಳಲ್ಲಿ ನಾವು ನಮ್ಮ

ಸ್ವಂತಿಕೆಯನ್ನು ಬಿಟ್ಟು ಪಾಶ್ಚಿಮಾತ್ಯರ ಅನುಕರಣೆಯನ್ನು ಮಾಡುತ್ತಿದ್ದೇವೆ. ಆದ್ದರಿಂದ ಭಾರತಮಾತೆಯು ಜಡವಾಗಿದ್ದಾಳೆ ಎಂದು ವಿವರಿಸಿದ್ದಾರೆ. ಈ ಜಡತ್ವವು ಕೇವಲ ತಾತ್ಕಾಲಿಕವಾಗಿರುವಂತಹದ್ದು, ಏಕೆಂದರೆ ಭಾರತದ ತತ್ವ ಆದರ್ಶಗಳು ವಿಶ್ವಕ್ಕೆ ಮಾದರಿಯಾಗಿರುವಂತಹ ಹಾಗೂ ವಿಶ್ವಗುರುವಾಗಿ ಪ್ರಪಂಚಕ್ಕೆ ಶಾಂತಿ ಸಂದೇಶವನ್ನು ಸಾರುವಂತಹ ಉನ್ನತ ಮೌಲ್ಯಗಳನ್ನು ಭಾರತವು ಹೊಂದಿದೆ ಎಂಬುದಾಗಿ ಲೇಖಕರು ವಿವರಿಸಿದ್ದಾರೆ. ಯಾವುದೇ ದೇಶ ಯಾವಾಗ ತನ್ನ ಸ್ವಂತಿಕೆಯನ್ನು ಬಿಟ್ಟು ಬೇರೆ ರೀತಿಯಾದಂತಹ ಸಂಸ್ಕೃತಿಯನ್ನು ಅನುಕರಣೆ ಮಾಡುತ್ತದೆಯೋ ಆಗ ಅದು ಆತ್ಮವಿಲ್ಲದ ಶರೀರದಂತೆ ಎಂಬುದಾಗಿ ಲೇಖಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

“ವಸಾಹತು ವಿದ್ವತ್ ಪ್ರಣೀತದಿಂದ ರಚಿತವಾದ ಗತದ ಸ್ವರೂಪವನ್ನು ಪರಿಶೀಲಿಸುತ್ತಾ ಹೋದಂತೆ ನಮಗೆ ಮತ್ತಷ್ಟು ಸ್ಪುಟವಾಗಿ ಹೊಳೆದ ಸಂಗತಿಯೆಂದರೆ ರಾಷ್ಟ್ರೀಯವಾದಿ ಚಿಂತನೆಯ ಅಂಶಗಳು ಸಹ ಈ ವಸಾಹತು ಪರಂಪರೆಯಿಂದಲೇ ಎರವಲು ಪಡೆದಿರುವುದು” (ಥಾಪರ್ ರೋಮಿಲಾ, 2012, ಪು. 16).

ನಾವು ಭಾರತೀಯ ಇತಿಹಾಸವನ್ನು ಅಧ್ಯಯನ ಮಾಡುವಂತಹ ಸಂದರ್ಭದಲ್ಲಿ ಪಾಶ್ಚಿಮಾತ್ಯ ಸಾಹಿತ್ಯವನ್ನು ಪ್ರಮುಖವಾದಂತಹ ಆಧಾರವಾಗಿ ತೆಗೆದುಕೊಳ್ಳುತ್ತೇವೆ ಮತ್ತು ನಮ್ಮ ಚಾರಿತ್ರಿಕ ಇತಿಹಾಸವನ್ನು ಗತಕಾಲದ ಉನ್ನತ ಆಧ್ಯಾತ್ಮಿಕ ಮೌಲ್ಯಾದರ್ಶಗಳನ್ನು ಸಂಕುಚಿತಗೊಳಿಸಿದ್ದೇವೆ. ಇದಕ್ಕೆ ಕಾರಣ ಪಾಶ್ಚಿಮಾತ್ಯ ವಿದ್ವಾಂಸರು ಭಾರತದ ಇತಿಹಾಸ ಮತ್ತು ಸಂಸ್ಕೃತಿಯನ್ನು ಏಕಮುಖವಾಗಿ ಚಿತ್ರಿಸಿದ್ದಾರೆ ಎನ್ನುವುದು ಲೇಖಕರ ಪ್ರಮುಖ ವಿಮರ್ಶೆಯಾಗಿದೆ. ಈ ಮೂಲಕ ನಮ್ಮ ರಾಷ್ಟ್ರೀಯತೆಯೂ ಕೂಡ ಪಾಶ್ಚಿಮಾತ್ಯ ಚಿಂತನೆಗಳಿಂದ ಬಂದಿರುವಂತಹ ಪರಿಕಲ್ಪನೆಯಾಗಿದ್ದು ನಮ್ಮ ಪಾರಂಪರಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ವೈಭವವನ್ನು ಅದು ಮರೆಮಾಡುತ್ತದೆ ಎಂಬುದು ಲೇಖಕರ ಅಭಿಪ್ರಾಯ.

“ಒಂದು ಜನತೆಯ ಇಚ್ಛಾಶಕ್ತಿಯ ಸಾರ್ವಭೌಮತ್ವವನ್ನು ಪ್ರತಿಪಾದಿಸುವ ಜನತಂತ್ರ ಸಿದ್ಧಾಂತದಲ್ಲಿ ರಾಷ್ಟ್ರೀಯತಾ ಸಿದ್ಧಾಂತವು ಅಂತರ್ಗತವಾಗಿದೆ ಎಂಬುದನ್ನು ಇತಿಹಾಸವು ತೋರಿಸುತ್ತದೆ. ಹಾಗೆಂದರೆ ಒಂದು ರಾಷ್ಟ್ರೀಯ ಆಡಳಿತ ವ್ಯವಸ್ಥೆಗಾಗಿ ಒಂದು ರಾಷ್ಟ್ರೀಯತೆಯು ಮುಂದಿಡುವ ಬೇಡಿಕೆಗೆ ಯಾವುದೇ ಅಹವಾಲುಗಳ ಪಟ್ಟಿಯ ಒತ್ತಾಸೆಯ ಅಗತ್ಯವಿರುವುದಿಲ್ಲ. ಅದನ್ನು ಸಮರ್ಥಿಸಲು ಜನತೆಗೆ ಇಚ್ಛಾ ಶಕ್ತಿ ಸಾಕು” (ಅಂಬೇಡ್ಕರ್ ಬಿ. ಆರ್. , 2015, ಸಂ. 6, ಪು. 405).

ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಜನರ ಪ್ರಭುತ್ವದ ಬೇಡಿಕೆಯಲ್ಲಿ ವ್ಯಕ್ತವಾಗುತ್ತದೆ. ಹಾಗೂ ಯಾವುದೇ ಒಂದು ಪ್ರಭುತ್ವವು ತನ್ನ ಅಂತಿಮ ಗುರಿಯಾಗಿ

ಜನತೆಯ ಏಕತೆಯನ್ನು ಒಗ್ಗಟ್ಟನ್ನು ಸಾಧಿಸುವಂತಹ ವ್ಯವಸ್ಥೆಯಾಗಿ ದೇಶದಲ್ಲಿ ಕಾರ್ಯಾಚರಣೆಯಲ್ಲಿ ಇರುತ್ತದೆ ಎಂದು ಲೇಖಕರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಪ್ರತಿಯೊಂದು ದೇಶದಲ್ಲಿರುವ ಸರ್ಕಾರಗಳ ಪ್ರಥಮ ಆದ್ಯತೆ ಐಕ್ಯತೆಯನ್ನು ಸ್ಥಾಪಿಸಿ ಆ ಮೂಲಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಸಮಾನತೆಯನ್ನು ತೊಡೆದು ಹಾಕಿ ಸಾಮಾಜಿಕ ನ್ಯಾಯದ ಆಧಾರದಲ್ಲಿ ಸಮಾನತೆಯ ಹಾಗೂ ಸೋದರತೆಯ ಸಮಾಜವನ್ನು ನಿರ್ಮಾಣ ಮಾಡುವುದು ಆಗಿರುತ್ತದೆ ಎಂದು ಲೇಖಕರು ತಮ್ಮ ರಾಷ್ಟ್ರೀಯ ಪರಿಕಲ್ಪನೆಯನ್ನು ರಾಜಕೀಯ ವ್ಯವಸ್ಥೆಯಲ್ಲಿ ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ.

"ರಾಷ್ಟ್ರ ನಿರ್ಮಾಣದ ಪ್ರಕ್ರಿಯೆಗೆ ಎರಡು ಸ್ವಭಾವಗಳಿವೆ. ಒಂದು ರಾಷ್ಟ್ರೀಯತೆಯ ಪರವಾದ ಗತಕಾಲದ ಮೂಲ ಧಾತುಗಳನ್ನು ಗುರುತಿಸುವುದು ಮತ್ತೊಂದು ವರ್ತಮಾನದ ವಸಾಹತುವಿಗೆ ಪ್ರತಿರೋಧದ ರೂಪದಲ್ಲಿ ರಾಷ್ಟ್ರ ಪರಿಕಲ್ಪನೆಯನ್ನು ನಿರ್ಮಿಸುವುದು" (ಪಣಿಕ್ಕರ್, ಕೆ. ಎನ್. , 2016, ಪು. 56).

ಲೇಖಕರು ಭಾರತದ ರಾಷ್ಟ್ರೀಯತೆಯು ಗತಕಾಲದಲ್ಲಿ ಇದ್ದರೂ ಅದರ ಅನುಭವವನ್ನು ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಕಾಣುತ್ತೇವೆ. ಏಕೆಂದರೆ ಜನರು ತಮ್ಮ ಪಾರಂಪರಿಕ ಮೌಲ್ಯಾದರ್ಶಗಳನ್ನು ಉಳಿಸಿಕೊಳ್ಳಲು ಹಾಗೂ ಸ್ವರಾಜ್ಯವನ್ನು ಗಳಿಸುವುದಕ್ಕಾಗಿ ಏಕಕಾಲದಲ್ಲಿ ತಮ್ಮ ತನವನ್ನು ಉಳಿಸಿಕೊಳ್ಳುವುದರ ಜೊತೆಗೆ ಪಾಶ್ಚಿಮಾತ್ಯ ಚಿಂತನೆಗಳನ್ನು ವಿರೋಧಿಸುವ ಕಾರ್ಯದಲ್ಲಿ ಭಾರತೀಯರು ಮಗ್ನರಾದರು. ಈ ಮೂಲಕ ತಮ್ಮ ಆಧುನಿಕ ರಾಷ್ಟ್ರೀಯತೆಯನ್ನು ಸ್ಥಾಪಿಸಲು ಪ್ರಯತ್ನಿಸಿದರು ಎಂಬುದಾಗಿ ಲೇಖಕರು ವಿವರಿಸಿದ್ದಾರೆ.

"ಸಾಮಾಜಿಕ ಪುನರ್‌ರಚನೆ ಮತ್ತು ರಾಜಕೀಯ ಸ್ವರಾಜ್ಯಕ್ಕಾಗಿ ಹೋರಾಟ ಇವೆರಡೂ ಒಟ್ಟೊಟ್ಟಿಗೆ ನಡೆಯಬೇಕು, ಅವೆರಡೂ ಬೇರೆ ಬೇರೆ ಅಲ್ಲ ಆದರೆ ಹೊಸದೊಂದು ಸಮಾಜ ರಚನೆಯನ್ನು ಬಲವಂತವಾಗಿ ಹೇರಲಾಗದು, ಅದು ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತದಷ್ಟೆ. ಸುಧಾರಣೆಗಳ ಕುರಿತು ನಿಧಾನವಾಗಿ ಮುಂದುವರೆಯಲು ನನಗೆ ಸಹನೆಯಿಲ್ಲ, ಸಂಪೂರ್ಣವಾದ, ಮೂಲಭೂತವಾದ ಸಾಮಾಜಿಕ ಪುನರ್ ರಚನೆ ಈಗಲೇ ಆಗಬೇಕು ಎನ್ನುತ್ತೇನೆ. ಆದರೆ ಅದನ್ನು ಹಿಂಸೆಯ ಮೂಲಕ, ಬಲವಂತವಾಗಿ ಹೇರಿದಾಗ ಕೂಡದು. ಅದನ್ನು ಒಂದು ಸಹಜ ಸಾವಯವ ಬೆಳವಣಿಗೆಯಾಗಿ ಮಾಡಬೇಕು" (ಗೋಪಾಲಕೃಷ್ಣ ಗಾಂಧಿ, 2008, ಪು. 251).

ಲೇಖಕರು ರಾಜಕೀಯ ಸ್ವಾತಂತ್ರ್ಯ ಮತ್ತು ಸಾಮಾಜಿಕ ಮರುಜೋಡಣೆ ಕಾರ್ಯಗಳು ಏಕಕಾಲದಲ್ಲಿ ನಡೆಯಬೇಕು ಎಂದು ವಿವರಿಸಿದ್ದಾರೆ. ಅಂದರೆ ಬಾಹ್ಯ

ದೇಶಗಳ ಸಾಂಸ್ಕೃತಿಕ ಮತ್ತು ಸಾಮಾಜಿಕ ವ್ಯವಸ್ಥೆಗಳನ್ನು ನಾವು ಒಪ್ಪಿಕೊಂಡು ಅನುಸರಿಸಬೇಕೇ ಹೊರತು ಬಲವಂತವಾಗಿ ಯಾವುದೇ ಸಮಾಜದ ಮೇಲೆ ಹೇರಬಾರದು. ಏಕೆಂದರೆ ಸಾಮಾಜಿಕ ಸಂರಕ್ಷಣೆಯು ಸ್ವಂತಿಕೆಯನ್ನು ಕಳೆದುಕೊಂಡರೆ ಅದು ರಾಜಕೀಯ ವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮವನ್ನು ಉಂಟುಮಾಡುತ್ತದೆ ಎಂದು ಲೇಖಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

"ಗತಕಾಲದ ರಾಷ್ಟ್ರೀಯ ಐಕ್ಯತೆ ಮತ್ತು ಸಂಘಟನೆಗಳನ್ನು ಕುದುರಿಸಿದ ಸಾಧನಗಳಲ್ಲಿ ಸಂಸ್ಕೃತಿ, ಭಾಷೆಯು ಅತ್ಯಂತ ಪ್ರಭಾವಶಾಲಿಯಾಗಿತ್ತು. ಭಾರತೀಯ ಜ್ಞಾನ ಭಂಡಾರದ ಬೀಗದ ಕೈ ಎನಿಸಿರುವ ಸಂಸ್ಕೃತವು ಪ್ರಾಚೀನ ಭಾರತದ ಧರ್ಮ ಮತ್ತು ಸಂಸ್ಕೃತಿಗಳಿಗೂ ಕೈಗನ್ನಡಿಯಷ್ಟೆ. ಪುರಾತನ ಋಷಿಗಳ ಕಾವ್ಯವಾಣಿಯ ಧ್ವನಿಮುದ್ರಿಕೆಗಳಂತಿರುವ ವೇದ, ಉಪನಿಷತ್ತು ಹಾಗೂ ಭಗವದ್ಗೀತೆಗಳ ಅಧ್ಯಯನ ವಾಚಕ ಶ್ರವಣಗಳು ಯಾವ ಒಂದು ಪ್ರಾಂತ್ಯದ ಸ್ವತ್ತಾಗಿರಲಿಲ್ಲ. ಇಡೀ ಭಾರತದ ತಪೋವನಗಳಲ್ಲೂ, ದೇವಾಲಯಗಳಲ್ಲೂ, ದ್ವಿಜರ ಗೃಹಗಳಲ್ಲೂ, ವೇದ ಪಾರಾಯಣವಾಗುತ್ತಿತ್ತು. ವಿವಾಹ, ಉಪನಯನ ಮುಂತಾದ ಶುಭ ಕಾರ್ಯಗಳು, ಸಾವಿಗೆ ಸಂಬಂಧಿಸಿದ ಅಪರ ಕರ್ಮಗಳು ದೇಶಕ್ಕೆಲ್ಲಾ ಸಾರ್ವತ್ರಿಕವಾಗಿ ಅನ್ವಯವಾಗುತ್ತಿರುವುದರಿಂದ ಧಾರ್ಮಿಕ ಐಕ್ಯತೆ ಪ್ರಾಪ್ತವಾಯಿತು" (ನಂಜುಂಡಸ್ವಾಮಿ ಎ. ಎಸ್. , 1960, ಪು. 13).

ಲೇಖಕರು ಭಾರತವು ವೈವಿಧ್ಯಮಯವಾದ ಮತಧರ್ಮಗಳನ್ನು, ಸಾಮಾಜಿಕ ಸಂಪ್ರದಾಯಗಳನ್ನೂ, ಭೌಗೋಳಿಕ ಭಿನ್ನತೆಯನ್ನೂ ಹೊಂದಿದ್ದರೂ ಸಂಸ್ಕೃತವು ಇಡೀ ಭಾರತವನ್ನು ಒಗ್ಗೂಡಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿತ್ತು. ಭಾರತೀಯ ಸಾಹಿತ್ಯವು ಸಂಸ್ಕೃತ ಭಾಷೆಯಲ್ಲಿದ್ದು ಜನರಿಗೆ ತಲುಪಿಸುವಲ್ಲಿ ಋಷಿಮುನಿಗಳು, ಪಂಡಿತರು ದೇಶದ ಉದ್ದಗಲಕ್ಕೂ ಸಂಚಾರ ಮಾಡಿ ಭಾರತದ ಆಧ್ಯಾತ್ಮಿಕ ಸಾಹಿತ್ಯವಾಗಿರುವಂತಹ ಉಪನಿಷತ್ತುಗಳು, ವೇದಗಳು, ಧರ್ಮ ಗ್ರಂಥಗಳನ್ನು ಜನರಿಗೆ ಬೋಧನೆ ಮಾಡಿ ಭಾರತೀಯ ಧಾರ್ಮಿಕ ಉನ್ನತಿಯನ್ನು ಮತ್ತು ಪಾರಂಪರಿಕ ಇತಿಹಾಸವನ್ನು ತಿಳಿಸುವುದರ ಮೂಲಕ ಭಾರತದ ಐಕ್ಯತೆಯನ್ನು ಸಮಗ್ರತೆಯನ್ನು ಕಾಪಾಡುತ್ತಿದ್ದರು. ಈ ಮೂಲಕ ಪ್ರಾಚೀನ ಭಾರತದಲ್ಲಿ ರಾಜಕೀಯ ಐಕ್ಯತೆ ಹಾಗೂ ರಾಷ್ಟ್ರೀಯತೆ ಕಂಡುಬರದಿದ್ದರೂ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಐಕ್ಯತೆಯ ಮೂಲಕ ರಾಷ್ಟ್ರೀಯ ಐಕ್ಯತೆ ಹಾಗೂ ಸಮಗ್ರತೆಯನ್ನು ಕಾಣುತ್ತೇವೆ ಎಂದು ಲೇಖಕರು ಭಾರತದ ರಾಷ್ಟ್ರೀಯ ಐಕ್ಯತೆಯನ್ನು ವಿವರಿಸಿದ್ದಾರೆ.

"ಆನಂದ ಕುಮಾರಸ್ವಾಮಿ, ಗಾಂಧಿ, ವಿವೇಕಾನಂದ ಹಾಗೂ ನೆಹರೂ ಅವರು ನಡೆಸಿದ ರಾಷ್ಟ್ರೀಯತೆಯ ಚಿಂತನೆ, ಧಾರ್ಮಿಕ ಮೂಲಭೂತವಾದಿ ನೆಲೆಗಟ್ಟಿನ

ಚಿಂತನೆಯಲ್ಲ, ಇವರು ವೈವಿಧ್ಯತೆಯನ್ನು ರಾಷ್ಟ್ರೀಯತೆಯ ಮುಖ್ಯ ಅಂಶವಾಗಿ ಪ್ರತಿಪಾದಿಸಿದರು. ಮಹಾತ್ಮ ಗಾಂಧಿ ಅವರು 1909ರಲ್ಲಿ ಬರೆದ 'ಹಿಂದ್ ಸ್ವರಾಜ್'ನಲ್ಲಿ ರಾಷ್ಟ್ರೀಯತೆಯನ್ನು ಕುರಿತು ಆಡಿರುವ ಮಾತುಗಳು ಗಮನಾರ್ಹವಾದವುಗಳು. ಅವರು ಬೇರೆ ಬೇರೆ ಧರ್ಮದ ಜನರು ಇದ್ದರೆ ಹಿಂದೂಸ್ಥಾನ ಒಂದು ರಾಷ್ಟ್ರವಾಗದೇ ಹೋದೀತೆ? ಬೇರೆ ದೇಶಗಳಿಂದ ಹೊಸಬರು ಬಂದರೆ ರಾಷ್ಟ್ರೀಯತೆ ನಷ್ಟವಾಗದು, ಬಂದವರು ಇವರಲ್ಲೇ ಬೆರೆತು ಹೋಗುತ್ತಾರೆ. ಆ ಸ್ಥಿತಿ ಬಂದಾಗಲೇ ಒಂದು ದೇಶ ರಾಷ್ಟ್ರವಾಗುತ್ತದೆ. ಆ ದೇಶಕ್ಕೆ ಹೊರಗಿನದನ್ನು ಜೀರ್ಣಿಸಿಕೊಳ್ಳುವ ಶಕ್ತಿ ಬೇಕು. ಹಿಂದೂಸ್ಥಾನ ಯಾವಾಗಲೂ ಹೀಗೆಯೇ ಇದೆ" (ದೇವರಾಜ್ ಡಿ. ಆರ್. , 2024, ಪು. 8–9).

ಭಾರತದ ಬುದ್ಧಿ ಜೀವಿಗಳು ಅನೇಕ ಜನ ಪ್ರಮುಖವಾಗಿ ಬ್ರಿಟಿಷರ ವಿರುದ್ಧ ಹೋರಾಟ ಮಾಡುವ ಸಂದರ್ಭದಲ್ಲಿ ಭಾರತವು ಯಾವ ರೀತಿಯಾದ ಒಗ್ಗಟ್ಟನ್ನು ಹೊಂದಿದೆ ಹಾಗೂ ಭಾರತವು ತನ್ನ ಮೂಲ ಪರಂಪರೆಯನ್ನು ಗತಕಾಲದಿಂದಲೂ ಹೇಗೆ ಉಳಿಸಿಕೊಂಡು ಬಂದಿದೆ ಎನ್ನುವ ವಿಚಾರಗಳನ್ನು ಗಾಂಧಿ, ಸ್ವಾಮಿ ವಿವೇಕಾನಂದ, ನೆಹರೂ ಮುಂತಾದ ದಾರ್ಶನಿಕರು ಲೇಖನ, ಪುಸ್ತಕ, ಪ್ರವಚನ ಹಾಗೂ ಭಾಷಣಗಳ ಮುಖಾಂತರ ಭಾರತೀಯರಿಗೆ ತಿಳಿಸಿಕೊಡುವುದರ ಮೂಲಕ ರಾಷ್ಟ್ರೀಯ ಹೋರಾಟವನ್ನು ಸಂಘಟನೆ ಮಾಡುತ್ತಿದ್ದರು ಎಂಬುದಾಗಿ ಲೇಖಕರು ವಿಶ್ಲೇಷಿಸಿದ್ದಾರೆ.

"ಶೂದ್ರರಿಗೆ ಹಾಗೂ ಅತಿಶೂದ್ರರಿಗೆ, ಸ್ವತಂತ್ರರು ಮತ್ತು ಸಮಭಾಗಿಗಳಾಗಿರಲು ಅವಕಾಶವನ್ನು ಕೊಡದ ಸಂವಿಧಾನವೊಂದು ಜಾರಿಗೆ ಬರಲು ನಾನು ಯಾವತ್ತಿಗೂ ಬಿಡುವುದಿಲ್ಲ. ಹಾಗೆಯೇ ನಾಡಿನ ಹಿತಾಸಕ್ತಿಯ ಸೋಗಿನಲ್ಲಿ ಬಹುಸಂಖ್ಯಾತರು ದಬ್ಬಾಳಿಕೆ ನಡೆಸುವುದಕ್ಕೆ ನನ್ನ ಬೆಂಬಲವಿಲ್ಲ" ಎಂದು ಸ್ಪಷ್ಟಪಡಿಸುತ್ತಾರೆ (ಬಿ. ಆರ್. ಅಂಬೇಡ್ಕರ್. 2018. ಸಂಪುಟ 7, ಪುಟ 135).

ಅಂಬೇಡ್ಕರ್ ಅವರು ಸಾಮಾಜಿಕ ಹಾಗೂ ರಾಜಕೀಯ ಅವಕಾಶಗಳಿಂದ ವಂಚಿತರಾದ ಜನರಿಗೆ ಸಂವಿಧಾನದ ಮೂಲಕ ಸರ್ಕಾರದ ಮೂಲಕ ಭಾಗವಹಿಸಿ ಸಮಾಜದಿಂದ ಕಡೆಗಣಿಸಲ್ಪಟ್ಟ ಭಾರತೀಯರನ್ನು ಭಾರತ ಮಾತೆಯ ಮಡಿಲಿಗೆ ಸೇರಿಸಿಕೊಳ್ಳುವ ಮೂಲಕ ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಯನ್ನು ಸ್ಥಾಪಿಸಿ ಸಮಾಜದಲ್ಲಿ ಸೋದರತೆಯಿಂದ ಎಲ್ಲರೂ ಸಾಮಾಜಿಕ ನ್ಯಾಯದ ಆಧಾರದ ಮೇಲೆ ಸಮಾನ ಅವಕಾಶಗಳನ್ನು ಪಡೆಯುವುದರ ಮೂಲಕ ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರಯತ್ನಿಸಿದರು.

ಆಧುನಿಕ ರಾಷ್ಟ್ರೀಯ ಪರಿಕಲ್ಪನೆಯನ್ನು ಭಾರತೀಯ ಸಾಮಾಜಿಕ ಮತ್ತು

ಆಧ್ಯಾತ್ಮಿಕ ಅಂಶಗಳ ಆಧಾರದ ಮೇಲೆ ಮಾರ್ಪಾಡು ಮಾಡಿ ಅಂಬೇಡ್ಕರ್ ಅವರು ತಮ್ಮ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಪ್ರತಿಪಾದನೆ ಮಾಡಿದ್ದಾರೆ. ಏಕೆಂದರೆ ಕೇವಲ ರಾಜಕೀಯ ವ್ಯವಸ್ಥೆಯಿಂದ ಮಾತ್ರ ದೇಶದ ಏಕತೆ ಮತ್ತು ಸಮಗ್ರತೆಯನ್ನು ತರಲು ಸಾಧ್ಯವಿಲ್ಲ ಎನ್ನುವ ಅಂಶಗಳನ್ನು ಅರಿತಿರುವಂತಹ ಅಂಬೇಡ್ಕರ್ ಅವರು ಭಾರತೀಯ ಮೌಲ್ಯಗಳನ್ನು ಹಾಗೂ ಸಾಂಸ್ಕೃತಿಕ ನಂಟನ್ನು ಉಳಿಸಿಕೊಂಡೇ ತಮ್ಮ ರಾಜಕೀಯ ರಾಷ್ಟ್ರೀಯತೆಯನ್ನು ಪ್ರತಿಪಾದಿಸಿದ್ದಾರೆ ಎಂದು ಹೇಳಬಹುದಾಗಿದೆ.

**ಸಂಶೋಧನಾ ಸಮಸ್ಯೆಯ ಹೇಳಿಕೆ:**

ಮೇಲಿನ ಸಾಹಿತ್ಯದ ಪರಿಶೀಲನೆಯಿಂದ ಎರಡೂ ರೀತಿಯ ವಿವರಣೆಗಳನ್ನು ಕಂಡುಕೊಳ್ಳಲಾಗಿದೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಚಿಂತನೆಗಳು ಭಾರತದಲ್ಲಿ ಅನೇಕ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡಿವೆ ಹಾಗೂ ಭಾರತದಲ್ಲಿ ಎಲ್ಲಾ ಜಾತಿ, ಭಾಷೆ, ವರ್ಗಗಳನ್ನು ಒಳಗೊಂಡಂತಹ ರಾಷ್ಟ್ರೀಯ ಏಕತೆಯನ್ನು ಸಾಧ್ಯವಿರುವುದರ ಬಗ್ಗೆ ಒಳನೋಟವನ್ನು ನೀಡುತ್ತಾರೆ.

ಮತ್ತೊಂದು ವಾದವು ಅವರು ಪ್ರತಿಪಾದಿಸುವ ರಾಷ್ಟ್ರೀಯತೆ ಪರಿಕಲ್ಪನೆ ಪಾಶ್ಚಿಮಾತ್ಯರ ವಿಚಾರಗಳಿಂದ ಕೂಡಿದ್ದು, ಅವು ರಾಜಕೀಯ, ಸಮಾಜ ಮತ್ತು ಸಂಸ್ಕೃತಿಯಲ್ಲಿ ಬಹುತ್ವ ಹೊಂದಿರುವ ಭಾರತದಲ್ಲಿ ಆಂತರಿಕ ಕಲಹಕ್ಕೆ ಕಾರಣವಾಗುತ್ತಿದ್ದೆ ಎಂಬ ಅಭಿಪ್ರಾಯ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಈ ಕೆಳಗಿನ ಸಂಶೋಧನಾ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ.

**ಸಂಶೋಧನಾ ಸಮಸ್ಯೆಗಳು:**

1. ಡಾ. ಬಿ.ಆರ್. ಅಂಬೇಡ್ಕರ್ ಅವರು ಪ್ರತಿಪಾದಿಸುವ ರಾಷ್ಟ್ರೀಯತೆಯು ವೈವಿಧ್ಯಮಯವಾದ ಭಾರತೀಯ ಸಮಾಜದಲ್ಲಿ ಏಕತೆಯನ್ನು ತರಲು ಸಾಧ್ಯವೇ?
2. ಡಾ. ಬಿ.ಆರ್. ಅಂಬೇಡ್ಕರ್ ಅವರ ರಾಷ್ಟ್ರೀಯತೆಯನ್ನು ಕುರಿತ ಚಿಂತನೆಗಳು ಭಾರತೀಯರಲ್ಲಿ ರಾಷ್ಟ್ರೀಯತೆಯ ಮನೋಭಾವವನ್ನು ಮೂಡಿಸುವಲ್ಲಿ ಸಫಲವಾಗಿವೆಯೇ?

**ಊಹಾ ಸಿದ್ಧಾಂತ:**

1. ಡಾ. ಬಿ.ಆರ್. ಅಂಬೇಡ್ಕರ್ ಅವರ ರಾಷ್ಟ್ರೀಯತೆಯನ್ನು ಕುರಿತ ವಿಚಾರಗಳು ಪಾಶ್ಚಿಮಾತ್ಯರ ವಿಚಾರಗಳಿಂದ ಪ್ರಭಾವಿತವಾಗಿದ್ದು ಭಾರತದಂತಹ ಬಹುಸಂಸ್ಕೃತಿಯ ರಾಷ್ಟ್ರದ ರಾಜಕೀಯ ಐಕ್ಯತೆಯನ್ನು ಸಾಧಿಸಿದ್ದರು ಸಾಮಾಜಿಕ ಮತ್ತು ಸಾಂಸ್ಕೃತಿಕ ವೈವಿಧ್ಯತೆಯ ಮೇಲೆ ಪ್ರತಿಕೂಲ ಪರಿಣಾಮವನ್ನುಂಟುಮಾಡಿದೆ.
2. ಭಾರತೀಯ ಸಮಾಜವು ವೈವಿಧ್ಯತೆಯಲ್ಲಿ ಏಕತೆ ಎಂಬ ತತ್ವದ ಆಧಾರದ ಮೇಲೆ

ರೂಪುಗೊಂಡಿದ್ದು, ಈ ವಿಚಾರಧಾರೆಯು ಇಲ್ಲಿನ ಪಾರಂಪರಿಕ ರಾಷ್ಟ್ರದ ಕಲ್ಪನೆಯಲ್ಲು ಸೇರಿದೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ಪಾಶ್ಚಿಮಾತ್ಯ ಆಧಾರಿತ ರಾಷ್ಟ್ರೀಯತೆಯ ಚಿಂತನೆಗಳು ಈ ಪಾರಂಪರಿಕ ರಾಷ್ಟ್ರೀಯತೆಗೆ ಸವಾಲಿನದಾಗಿದೆ.

## ಅಧ್ಯಯನದ ಉದ್ದೇಶಗಳು:

1. ರಾಷ್ಟ್ರೀಯತೆಯ ಕುರಿತ ಡಾ. ಬಿ. ಆರ್. ಅಂಬೇಡ್ಕರ್‌ವರ ವಿಚಾರಧಾರೆಗಳು ಭಾರತದಲ್ಲಿ ರಾಜಕೀಯ ಐಕ್ಯತೆ ಸಾಧಿಸುವಲ್ಲಿ ಬೀರಿರುವ ಪ್ರಭಾವವನ್ನು ಪರಿಶೀಲಿಸುವುದು.
2. ರಾಷ್ಟ್ರೀಯತೆಯ ಕುರಿತ ಡಾ. ಬಿ. ಆರ್. ಅಂಬೇಡ್ಕರ್‌ವರ ಚಿಂತನೆಗಳು ಭಾರತದ ಸಾಮಾಜಿಕ ಮತ್ತು ಸಾಂಸ್ಕೃತಿಕ ವೈವಿಧ್ಯತೆಯ ಮೇಲೆ ಉಂಟುಮಾಡಿದ ಪರಿಣಾಮಗಳನ್ನು ವಿಶ್ಲೇಷಿಸುವುದು.
3. ಡಾ. ಬಿ. ಆರ್. ಅಂಬೇಡ್ಕರ್‌ವರು ಪ್ರತಿಪಾದಿಸುತ್ತಿರುವ ರಾಷ್ಟ್ರೀಯತೆಯ ಚಿಂತನೆ ಮತ್ತು ಭಾರತದ ಪಾರಂಪರಿಕ ರಾಷ್ಟ್ರೀಯತೆ ಚಿಂತನೆಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸುವುದು.

## ಅಧ್ಯಯನದ ವ್ಯಾಪ್ತಿ ಮತ್ತು ಮಹತ್ವ:

ಡಾ. ಬಿ.ಆರ್. ಅಂಬೇಡ್ಕರ್ ಅವರು ಬರೆದಂತಹ ಎಲ್ಲಾ ಕೃತಿಗಳು ಹಾಗೂ ಭಾಷಣಗಳು, ಬರಹಗಳು ಮತ್ತು ಸಂವಿಧಾನ ರಚನಾ ಸಭೆಯಲ್ಲಿ ನಡೆದ ಚರ್ಚೆಗಳನ್ನು ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಗಳ ಬಗ್ಗೆ ಬಂದಂತಹ ಪರ ಮತ್ತು ವಿರುದ್ಧವಾದಂತಹ ಸಾಹಿತ್ಯವನ್ನು ವಿಶ್ಲೇಷಣಾತ್ಮಕವಾಗಿ ಹಾಗೂ ವೈಜ್ಞಾನಿಕವಾಗಿ ಅಧ್ಯಯನ ಮಾಡುವುದು. ಅವರ ರಾಷ್ಟ್ರೀಯ ಪರಿಕಲ್ಪನೆ ಮತ್ತು ಭಾರತ ದೇಶದ ಬಗ್ಗೆ ಅವರು ಯಾವ ರೀತಿಯಾದಂತಹ ಅಭಿಪ್ರಾಯವನ್ನು ಹೊಂದಿದ್ದರು ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಡಾ. ಬಿ.ಆರ್. ಅಂಬೇಡ್ಕರ್ ಅವರು ತಮ್ಮ ಉನ್ನತ ಶಿಕ್ಷಣವನ್ನು ವಿದೇಶಗಳಲ್ಲಿ ಪಡೆದು ನಮ್ಮ ಭಾರತದ ರಾಷ್ಟ್ರೀಯತೆಗೆ ಯಾವ ರೀತಿಯಾದಂತಹ ಪರಿಕಲ್ಪನೆಯನ್ನು ಕೊಟ್ಟಿದ್ದಾರೆ ಎನ್ನುವುದನ್ನು ಸಮಗ್ರವಾಗಿ ಅಧ್ಯಯನ ಮಾಡುವುದು. ಈ ಮೂಲಕ ಡಾ. ಬಿ.ಆರ್. ಅಂಬೇಡ್ಕರ್ ಅವರ ಶ್ರೇಷ್ಠತೆಯನ್ನು ಗುರುತಿಸುವುದು. ಆ ಮೂಲಕ ಭಾರತದಲ್ಲಿ ನಡೆಯುವಂತಹ ಸಾಮಾಜಿಕ ಮತ್ತು ರಾಜಕೀಯ ಚಳುವಳಿಗಳನ್ನು ವ್ಯಕ್ತಿಯು ಘನತೆಯಿಂದ ಬದುಕನ್ನು ನಡೆಸಲು ಇರುವ ಸಂವಿಧಾನದ ಮೌಲ್ಯಗಳು ಮತ್ತು ಹಕ್ಕುಗಳನ್ನು ಎತ್ತಿಹಿಡಿದ ನಮ್ಮ ಭಾರತದ ರಾಷ್ಟ್ರೀಯ ಪರಿಕಲ್ಪನೆಗೆ ಡಾ. ಬಿ.ಆರ್. ಅಂಬೇಡ್ಕರ್ ಅವರ ಚಿಂತನೆಗಳ ಮರುಜೋಡಣೆಯನ್ನು ಮಾಡುವುದರ ಮೂಲಕ ಅವರ ವ್ಯಕ್ತಿತ್ವವನ್ನು ಶ್ರೇಷ್ಠವಾಗಿಸಿ ಜಾತಿಯ ಕಪಿಮುಷ್ಠಿಯಿಂದ ಅವರ ವಿಚಾರಗಳನ್ನು ರಾಷ್ಟ್ರೀಯ ವಿಚಾರಗಳಾಗಿ ಪರಿವರ್ತಿಸುವಂತೆ ಮಾಡುವುದು.

## ಸಂಶೋಧನಾ ವಿಧಾನ ಮತ್ತು ತಂತ್ರಗಳು:

ಪ್ರಸ್ತುತ ಅಧ್ಯಯನದ ಮಾಹಿತಿ ಸಂಗ್ರಹಣೆಗಾಗಿ ಉತ್ತಮ ವೈಜ್ಞಾನಿಕ ತಂತ್ರ ವಿಧಾನವನ್ನು ಬಳಸಿಕೊಂಡು ಕ್ಷೇತ್ರಾಧ್ಯಯನ ಕೈಗೊಳ್ಳಲಾಗುವುದು. ಇದರಿಂದ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಸ್ವರೂಪದ ಮಾಹಿತಿಯನ್ನು ಸಂಗ್ರಹಿಸಲಾಗುವುದು.

**ಮಾಹಿತಿ ಸಂಗ್ರಹಣೆ:**

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ವಿವಿಧ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗುವುದು. ಮಾಹಿತಿ ಸಂಗ್ರಹಣೆಯಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳು ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಪ್ರಾಥಮಿಕ ಮೂಲಗಳಿಂದ ಅಧ್ಯಯನ ಕ್ಷೇತ್ರದಿಂದ ನೇರವಾಗಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮಾಹಿತಿ ಸಂಗ್ರಹಣೆ ಮೂಲಗಳಲ್ಲಿ ಪ್ರಮುಖವಾಗಿ ಎರಡು ವಿಧಗಳಿವೆ. ಅವುಗಳೆಂದರೆ,

1. **ಪ್ರಾಥಮಿಕ ಮಾಹಿತಿ:** ಪ್ರಶ್ನಾವಳಿಯನ್ನು ಬಳಸಿಕೊಂಡು ಮಾಹಿತಿಯನ್ನು ಸಂಗ್ರಹಿಸುವಲ್ಲಿ ಸಂಶೋಧಕರು ಕಾರ್ಯಪ್ರವೃತ್ತರಾಗಿ, ವಾಸ್ತವಿಕ ಕ್ಷೇತ್ರದಿಂದ ತಾವೇ ನೇರವಾಗಿ ಮಾಹಿತಿದಾರರನ್ನು ಭೇಟಿ ಮಾಡಿ, ಭರ್ತಿ ಮಾಡಿದ ಪ್ರಶ್ನಾವಳಿಯನ್ನು ಹಿಂಪಡೆದು ಮಾಹಿತಿ ಸಂಗ್ರಹಿಸಲಾಗುವುದು ಹಾಗೂ ಆಧುನಿಕ ಕ್ಯಾಮೆರಾ ಬಳಸಿಕೊಂಡು ಮಾಹಿತಿ ಸಂಗ್ರಹಿಸಲಾಗುವುದು.
2. **ಮಾಧ್ಯಮಿಕ ಮಾಹಿತಿ:** ಪ್ರಸ್ತುತ ಅಧ್ಯಯನಕ್ಕೆ ಅಗತ್ಯವೆನಿಸಿದ ಮಾಧ್ಯಮಿಕ ಮಾಹಿತಿಯನ್ನು ಪ್ರಕಟಿತ ಮಸ್ತಕಗಳು, ಲೇಖನಗಳು, ಗ್ರಂಥಗಳು, ಸರ್ಕಾರಿ ಇಲಾಖಾ ದಾಖಲಾತಿಗಳು, ಜನಗಣತಿ ದಾಖಲಾತಿಗಳು, ಸಮೀಕ್ಷಾ ವರದಿಗಳು, ಪತ್ರಿಕೆಗಳು, ಅಂತರ್ಜಾಲ, ಮಹಾಪ್ರಬಂಧಗಳು, ವಿಶ್ವಕೋಶಗಳು ಇನ್ನೂ ಮುಂತಾದವುಗಳಿಂದ ಅಧ್ಯಯನಕ್ಕೆ ಅವಶ್ಯಕವಾದ ಮಾಹಿತಿಯನ್ನು ಸಂಗ್ರಹಿಸಲಾಗುವುದು.

**ಮಾಹಿತಿ ವಿಶ್ಲೇಷಣೆ:**

ಮೇಲೆ ತಿಳಿಸಿದ ಸಂಶೋಧನಾ ವಿಧಾನಗಳು, ತಂತ್ರಗಳು ಹಾಗೂ ವಿವಿಧ ಮೂಲಗಳಿಂದ ಸಂಗ್ರಹಿಸಿದ ಸಂಶೋಧನಾ ಮಾಹಿತಿಯನ್ನು ಪರಿಮಾಣಾತ್ಮಕ ಹಾಗೂ ಗುಣಾತ್ಮಕ ವಿಧಾನದಿಂದ ವಿಶ್ಲೇಷಿಸಿ, ಸಂಕೇತೀಕರಣ, ಪರಿಷ್ಕರಣೆ, ವರ್ಗೀಕರಣ ಹಾಗೂ ಸೂಚೀಕರಣದ ಮೂಲಕ ಅಗತ್ಯ ವಿಧಾನವನ್ನು ಬಳಸಿಕೊಂಡು ಮಾಹಿತಿಯನ್ನು ವಿಶ್ಲೇಷಿಸಲಾಗುವುದು.

**ಪರಾಮರ್ಶನ ಗ್ರಂಥಗಳು:**

1. ಅಂಬೇಡ್ಕರ್ ಬಿ.ಆರ್., (2015), ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು: ಸಂಪುಟ–1–6, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.
2. ಅಂಬೇಡ್ಕರ್ ಬಿ. ಆರ್. (2017). ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು, ಸಂಪುಟ–7, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.
3. ದೇವರಾಜ್ ಡಿ.ಆರ್., (2024), ಸಂವಾದ (ಅಂಬೇಡ್ಕರ್ ವಿಶೇಷಾಂಕ), ಏಪ್ರಿಲ್ 2024.
4. ಧನಂಜಯ್ ಕೀರ್ (ಮೂಲ), ಕುಮಾರಯ್ಯ ಡಿ.ಕೆ. (ಅನು), (2014), ಡಾ. ಬಿ.ಆರ್. ಅಂಬೇಡ್ಕರ್ ಜೀವನ ಮತ್ತು ಜೀವನ ಧ್ಯೇಯ, ಗೋಕುಲ್ ಪ್ರಕಾಶನ, ಪುಣೆ.
5. ನಂಜುಂಡಸ್ವಾಮಿ ಎ.ಎಸ್., (1960), ಭಾರತೀಯ ರಾಷ್ಟ್ರೀಯತೆಯ ವಿಕಾಸ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಪಣಿಕ್ಕರ್ ಕೆ.ಎನ್., (2016), ಭಾರತದ ರಾಷ್ಟ್ರೀಯತೆಯ ಪರಿಕಲ್ಪನೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು.
7. ರೋಮಿಲಾಥಾಪರ್, (2012), ರಾಷ್ಟ್ರೀಯತೆ–ಇತಿಹಾಸ, ಕಾನೂನು ಮತ್ತು ಸಂಸ್ಕೃತಿ ಕೇಂದ್ರಿತ ಚಿಂತನೆ, ಅಭಿರುಚಿ ಪ್ರಕಾಶನ, ಮೈಸೂರು.
8. ಸಿಂಹ ಶ.ಸ., (2021), ಶ್ರೀ ಅರವಿಂದರ ರಾಷ್ಟ್ರೀಯತೆ, ಔರೋನಾದ ಪಬ್ಲಿಷರ್ಸ್, ಬೆಂಗಳೂರು.
9. Arun Shourie, (2012), Worshipping of False God (Ambedkar and the Facts which have been Erased), Harper Collins Publishers, New York.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.